ದಿ: 24.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎಸ್ ಆರ್ ವಕೀಲರಿಂದಃ

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ ಸಹಿ ಮಾಡಲು ಬರುತ್ತದೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣವನ್ನು ನಾನು ಕನ್ನಡದಲ್ಲಿ ನನ್ನ ವಕೀಲರಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ಅದರಲ್ಲಿರುವ ಮಾಹಿತಿಯನ್ನು ನನ್ನ ವಕೀಲರು ಕೊಟ್ಟಿರುತ್ತಾರೆ. ನಾನು ದಾವಾದಲ್ಲಿ ತಿಳಿಸಿರುವಂತಹ ವಿಳಾಸದಲ್ಲಿ ಮತ್ತು ಹುಣಸಘಟ್ಟ ಗ್ರಾಮ, ತರೀಕೆರೆ ತಾಲ್ಲೂಕು ಎರಡೂ ಕಡೆಯೂ ವಾಸವಿರುತ್ತೇನೆ. ವಾದಿಯರಾದ ನಾವು ದೇವೇಂದ್ರಪ್ಪ, ಮಲ್ಲಪ್ಪ ಮತ್ತು ಮೂರ್ತಪ್ಪ ಎಂಬುವವರ ಮೇಲೆ ದಾವೆಯನ್ನು ಹೂಡಿದ್ದೇವೆ. ಈ ದಾವಾ ಹಾಕುವ ಮೊದಲು ಪ್ರತಿವಾದಿಗಳು ಮತ್ತು ನಾವು ಇಬ್ಬರೂ ಪೋಲಿಸ್ ಠಾಣೆಗೆ ದೂರನ್ನು ನೀಡಿದ್ದೆವು. ನಾನು ಪ್ರತಿವಾದಿಗಳ ವಿರುದ್ದ ನನ್ನ ಜಮೀನನ್ನು ನನಗೆ ಕೊಡುವಂತೆ ದಾವೆಯನ್ನು ಹೂಡಿದ್ದೇನೆ. ಸರ್ವೆ ನಂ 21 ರಲ್ಲಿ 9 ಎಕರೆಗಿಂತ ಹೆಚ್ಚು ಜಮೀನು ಇರುತ್ತದೆ. ಸರ್ವೆ ನಂ 21 ಎಷ್ಟು ಪೋಡುಗಳಾಗಿವೆ ಎಂದರೆ 4 ಪೋಡುಗಳಾಗಿವೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 21 ಪೋಡಾಗಿ ವಿಂಗಡಣೆಯಾಗಿರುವುದು 21ಃ3 ರಲ್ಲಿ ಪ್ರತಿವಾದಿಗಳಿಗೆ ಎಂದರೆ ಸರಿ. ಸರ್ವೆ ನಂಬರ್ 21ಃ3 ರಲ್ಲಿ ಪ್ರತಿವಾದಿಗಳು ಸ್ವಾದೀನದಲ್ಲಿದ್ದು ಬೆಳೆಯನ್ನು ಬೆಳೆದುಕೊಳ್ಳುತ್ತಿದ್ದಾರೆ ಎಂದರೆ ಸರಿ.

ಸರ್ವೆ ನಂಬರ್ 21ಃ4 ರಲ್ಲಿ ಈಗಲೂ ಸಹ ನಾನೇ ಸ್ವಾದೀನದಲ್ಲಿರುತ್ತೇನೆ, ಆದರೆ ಸರ್ವೆ ನಂಬರ್ 21ಃ4 ರಲ್ಲಿ 4 ವರ್ಷದಿಂದ ನನ್ನ ಸ್ವಾದೀನವನ್ನು ತೊಂದರೆ ಕೊಟ್ಟು ತಪ್ಪಿಸಿರುತ್ತಾರೆ. ಸರ್ವೆ ನಂ 21ಃ4 ರಲ್ಲಿ 2 ಎಕರೆ 5 ಗುಂಟೆ ಜಮೀನು ಇದೆ. ಸರ್ವೆ ನಂ 21ಃ4 ರ ಜಮೀನನ್ನು ಅಳತೆ ಮಾಡಿಸಲು ಅರ್ಜಿಯನ್ನು ಸರ್ವೆ ಕಛೇರಿಗೆ ಕೊಟ್ಟಿದ್ದೆ ಆದರೆ ಪ್ರತಿವಾದಿಗಳು ಅಳತೆ ಮಾಡಲು ಬಿಟ್ಟಿರುವುದಿಲ್ಲ. ಸರ್ವೆ ನಂಬರ್ 21ಃ4 ರ 2 ಎಕರೆ 5 ಗುಂಟೆ ಜಮೀನನ್ನು ಅಳತೆ ಮಾಡಲು ಪ್ರತಿವಾದಿಗಳು ತೊಂದರೆ ಕೊಟ್ಟ ಬಗ್ಗೆ ನಾನು ಪೋಲಿಸ್ ಠಾಣೆಗೆ ದೂರನ್ನು ಕೊಟ್ಟಿಲ್ಲ. ನಾವು ತರೀಕೆರೆಯಲ್ಲಿ ಮತವನ್ನು ಚಲಾಯಿಸುತ್ತೇವೆ. ನಾನು ಬಿಸ್ಲೇರೆ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ನನ್ನ ಆಧಾರ ಕಾರ್ಡ ಆಗಲೀ, ಚುನಾವಣಾ ಗುರುತಿನ ಚೀಟಿಯಾಗಲೀ ಹಾಜರುಪಡಿಸಿಲ್ಲ. ಪ್ರತಿವಾದಿಗಳು ತೊಂದರೆ ನೀಡುತ್ತಿರುವ ಬಗ್ಗೆ ನ್ಯಾಯಾಲಯಕ್ಕೆ ದಾವಾ ಹೂಡುವ ಸಮಯದಲ್ಲಿ ಪಹಣಿ, ಮ್ಯುಟೇಷನ್ ಮತ್ತು ವಿಲ್ ಪತ್ರ ದಾಖಲೆಗಳನ್ನು ಸಲ್ಲಿಸಿ ದಾವೆಯನ್ನು ಹಾಕಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಯಾವ ದಾಖಲೆಗಳನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬಿಸ್ಲೇರೆ ಗ್ರಾಮವೇ ಗ್ರಾಮ ಪಂಚಾಯ್ತಿ ಆಗಿರುತ್ತದೆ. ಸರ್ವೆ ನಂಬರ್ 21ಃ4 ಕ್ಕೆ ಸಂಬಂಧಪಟ್ಟಂತೆ ಕಂದಾಯ ಪಾವತಿಸುತ್ತಿದ್ದು ಅದರ ಕಂದಾಯ ರಶೀದಿಯನ್ನು ನ್ಯಾಯಾಲಯಕ್ಕೆ ಹಿಂದೆ ಹಾಜರುಪಡಿಸಿದ್ದೆ. ಕಂದಾಯ ರಶೀದಿಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೆ ನಂಬರ್ 21ಃ3 ರಲ್ಲಿ 2 ಎಕರೆ 20 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ್ 21ಃ3 ರ ಯಾವ ದಿಕ್ಕಿಗೆ ಸರ್ವೆ ನಂಬರ್ 21ಃ4 ರ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 21ಃ3 ರ ಜಮೀನು ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ್ 21ಃ4 ರ ಜಮೀನು ಚಕ್ಕುಬಂದಿ, ಪೂರ್ವಕ್ಕೆ ಃ ಬೋರಪ್ಪ ಕರಿಯಪ್ಪರ ಜಮೀನು, ಪಶ್ಚಿಮಕ್ಕೆ ಃ ಹಾರನಹಳ್ಳಿ ರಂಗಣ್ಣನವರ ಜಮೀನು, ಉತ್ತರಕ್ಕೆ ಃ ರಂಗಪ್ಪ ರುದ್ರಪ್ಪ ರವರ ಜಮೀನು, ದಕ್ಷಿಣಕ್ಕೆ ಃ ಮರುಳಪ್ಪ ರವರ ಜಮೀನು.

ಸರ್ವೆ ನಂಬರ್ 21ಃ4 ರ ಜಮೀನಿಗೆ ಸಂಬಂಧಪಟ್ಟಂತೆ ಸ್ಥಳ ತನಿಖೆ ಮಾಡಿಸಿ ಚಕ್ಕುಬಂದಿ ಧೃಡೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೆ ನಂಬರ್ 21ಃ4 ರ ಜಮೀನು ಮೂಲತಃ ತಿಮ್ಮಣ್ಣನವರಿಗೆ ಸೇರಿದ ಜಮೀನು ಆಗಿರುತ್ತದೆ. ತಿಮ್ಮಣ್ಣನವರು ನನಗೆ ಅಜ್ಜ ಆಗಬೇಕು. ತಿಮ್ಮಣ್ಣನವರು ನನ್ನ ತಾಯಿಯಾದ ಹನುಮಮ್ಮ ರವರಿಗೆ ತಿಮ್ಮಣ್ಣನವರನ್ನು ಸಾಯುವವರೆಗೆ ನೋಡಿಕೊಂಡಿದ್ದರಿಂದ ಆಸ್ತಿಯನ್ನು ನನ್ನ ತಾಯಿ ಹೆಸರಿಗೆ ಮಾಡಿಕೊಟ್ಟಿರುತ್ತಾರೆ. ತಿಮ್ಮಣ್ಣನವರು ನನ್ನ ತಾಯಿ ಹನುಮಮ್ಮ ರವರಿಗೆ ಯಾವ ಪತ್ರ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಃಏಃಒಃ

3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಕಡೂರು